ಸಂಪುಟ: ೨ ಸಂಚಿಕೆ: ೨ ಪುಟ: ೪ ಆಗಸ್ಟ್ ೨೦೧೮
* ಆಂತರಿಕ ಪ್ರಸರಣಕ್ಕೆ ಮಾತ್ರ

ಅರಿವು ಶಾಲೆಯ ಮಾಸಪತ್ರಿಕೆ

# ಅಂಗಳ

ಮಾಹಿತಿ, ಜ್ಞಾನ, ಸೃಜನಶೀಲತೆಗೊಂದು ವೇದಿಕೆ


ಸಂಪಾದಕರು: ಡಾ.ಎಂ.ಸಿ.ಮನೋಹರ ಸಂಚಿಕೆ ಸಂಪಾದಕರು: ಎಂ.ಮಂಜುಳಾ
www.arivu.org | e-mail: info@arivu.org ೯೪೮೦೨೨ ೭೭೮೭೨





### ವನ್ಯಜೀವಿ–ಮಾನವ ಪ್ರೀತಿಗೆ ರಂಗರೂಪ ನೀಡಿದ

## ಝುಂ ಝುಂ ಆನೆ ಮತ್ತು ಪುಟ್ಟ



ಮೈಸೂರಿನ ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ಜುಲೈ ೨೬ ರಂದು ನಮ್ಮ ಶಾಲೆಯ ೪, ೫ ಮತ್ತು ೬ ನೇ ತರಗತಿ ಮಕ್ಕಳು ವೈದೇಹಿ ವಿರಚಿತ 'ಝುಂ ಝುಂ ಆನೆ ಮತ್ತು ಪುಟ್ಟ' ನಾಟಕ ಅಭಿನಯಿಸಿದರು. 'ಉದ್ದ ಸೊಂಡಿಲ ಗಣಪತಿ...' ಪ್ರಾರ್ಥನೆಯೊಂದಿಗೆ ನಾಟಕ ಶುರುವಾಯಿತು. ಜಾತ್ರೆಯಲ್ಲಿ ಪುಟ್ಟನೆಂಬ ಹುಡುಗ 'ಝುಂ ಝುಂ ಆನೆ'ಯ ಸವಾರಿ ಮಾಡುತ್ತ ಗದ್ದಲದಲ್ಲಿ ಕಳೆದುಹೋಗುತ್ತಾನೆ. ಹೀಗೆ ತಪ್ಪಿಸಿಕೊಂಡ ಪುಟ್ಟ ಕಾಡಿನಲ್ಲಿ 'ಝುಂ ಝುಂ' ಜತೆ ಆನೆಯ ಕುಟುಂಬ ಸೇರಿಕೊಳ್ಳುತ್ತಾನೆ. ಅಲ್ಲಿ 'ಝುಂ ಝುಂ' ಆನೆಯ ಅಮ್ಮ ಸೇರಿದಂತೆ ಮತ್ತಿತರ ಕಾಡುಪ್ರಾಣಿಗಳು ಪುಟ್ಟನ ಮೇಲೆ ತೋರುವ ಪ್ರೀತಿ, ಕಾಳಜಿ... ಅದ್ಭುತ. ಪುಟ್ಟನನ್ನು ಸಂರಕ್ಷಿಸುವ ರೀತಿ–ನೀತಿಗಳು ಮನುಷ್ಯರ ಮತ್ತು ಪ್ರಾಣಿಗಳ ನಡುವಿನ ಸಂಬಂಧವನ್ನು ಬಹಳ ನವಿರಾಗಿ ಬಿಚ್ಚಿಟ್ಟವು. ಪುಟ್ಟ ಮತ್ತು ಆನೆಯ ನಡುವೆ ಬೆಳೆಯುವ ಆತ್ಮೀಯತೆ ಕಾಡಿನಲ್ಲೆಲ್ಲ ಪಸರಿಸುತ್ತದೆ.

ಅತ್ತ, ಕಳೆದುಹೋದ ಪುಟ್ಟ ಮತ್ತು ಸವಾರಿ ಆನೆಯನ್ನು ಹುಡುಕುವ ಪೊಲೀಸರ ಹಾಸ್ಯಭರಿತ ಕ್ಷಣಗಳು ಮತ್ತು ಮಾತುಗಳು ಪ್ರೇಕ್ಷಕರನ್ನು ನಗೆಗಡಲಲ್ಲಿ ಮುಳುಗಿಸಿತು. ಈ ನಡುವೆ, ಪುಟ್ಟ ಕಾಡುಗಳ್ಳರ ಕೈಗೆ ಸಿಕ್ಕಿಹಾಕಿಕೊಳ್ಳುತ್ತಾನೆ. ಆ ಕಾಡುಗಳ್ಳರ ವೇಷ–ಭೂಷಣ, ಅವರು ತಮ್ಮ ಕೈಯಲ್ಲಿಡಿದ ಗನ್ನು... ಇವರಿಂದ ಪುಟ್ಟ ಮತ್ತಾವ ತೊಂದರೆಗೆ ಸಿಕ್ಕಿಹಾಕಿಕೊಳ್ಳುವನೋ ಎಂಬ ಆತಂಕ, ಕಾತುರತೆಯನ್ನು ಕಾಯ್ದಿಡುತ್ತದೆ. ಪುಟ್ಟನಿಗಾಗಿ ಹುಡುಕಾಡುವಾಗ ಆತನ ತಂದೆ–ತಾಯಿಯ ಕಣ್ಣಲ್ಲಿ ಕಾಣುವ ಅಕ್ಕರೆ, ಮಮತೆ, ಹಂಬಲ, ಆತಂಕವನ್ನು ಪ್ರೇಕ್ಷಕರ ಮನಮುಟ್ಟುವಂತೆ ಅಭಿನಯಿಸಿದರು. ಪುಟ್ಟನನ್ನು ಕಳ್ಳರು ಅಪಹರಿಸಿ ಇಡುವ ಗುಹೆ, ಅದರ ಬಾಗಿಲನ್ನು ತೆರೆಯಲು ಹೇಳುವ ಮಂತ್ರ... ಎಲ್ಲೋ 'ಅಲಿಬಾಬ ಮತ್ತು ನಲವತ್ತು ಕಳ್ಳರು' ಎಂಬ ಕಥೆಯ ಚಿತ್ರಣವನ್ನು ಮನದಲ್ಲಿ ಮೂಡಿಸದೆ ಇರಲಿಲ್ಲ. ಬಾನ ಚಂದ್ರನೂ ಪುಟ್ಟನ ವೇಷ ನೋಡಿ ಏಮಾರುವುದು, ಪುಟ್ಟನಿಗಾಗಿ ಭೂಮಿಗೆ ಬಂದು ಅವನೊಂದಿಗೆ ಮಾತನಾಡುವುದು ವಿಶೇಷ ಎನಿಸಿತು. ಪ್ರಾಣಿಗಳಿಂದ ರಕ್ಷಿಸಲ್ಪಡುವ ಪುಟ್ಟ, ಕಾಡಿನ ಬಂಧುಗಳಿಂದ ವಿದಾಯದ ಸನ್ನಿವೇಶ, ಆ ಸನ್ನಿವೇಶಕ್ಕೆ ತಕ್ಕಂತಯ ಹಾಡು, ಸಂಗೀತ... ಒಟ್ಟಾರೆ ಮಕ್ಕಳು ತಮ್ಮ ಪಾತ್ರಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು. ಧ್ವನಿ–ಬೆಳಕು, ಪ್ರಸಾದನ, ರಂಗಪರಿಕರ, ವಸ್ತ್ರಾಲಂಕಾರ ಮತ್ತು ಸಂಗೀತ, ಮಾಧುರ್ಯಭರಿತ ಹಾಡುಗಳು ನಾಟಕದ ಜೀವ–ಭಾವ ಹೆಚ್ಚಿಸಿದವು. ರಂಗ ಚಟುವಟಿಕೆಗಳು ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಸಹಕಾರಿ ಎಂಬುದನ್ನು 'ಝುಂ ಝುಂ ಆನೆ ಮತ್ತು ಪುಟ್ಟ' ನಾಟಕಾಭಿನಯ ಮತ್ತೊಮ್ಮೆ ಸಾಬೀತುಪಡಿಸಿತು.

। ಎಂ.ಮಂಜುಳಾ ಮುಖ್ಯಶಿಕ್ಷಕಿ

## ಗುರುವಿನ ಮಾತು ಪಾಲಿಸುವ ಶಿಷ್ಯರಾಗೋಣವೇ?

### 'ಪುಸ್ತಕ ಓದು–ಹಂಚಿಕೆ' ಅನುಭವ

ಅರಿವು ಶಾಲೆಯಲ್ಲಿ ಶಿಕ್ಷಕರ ಬೌದ್ಧಿಕ ಬೆಳವಣಿಗೆಯೂ ಆಗಲೆಂಬ ಸದುದ್ದೇಶದಿಂದ ಪ್ರತಿ ಬುಧವಾರ 'ಪುಸ್ತಕ ಓದು, ಹಂಚಿಕೆ' ಚಟುವಟಿಕೆ ನಡೆಸಲಾ ಗುತ್ತದೆ. ಜುಲೈ ೨೫ ರಂದು ಆ ಅವಕಾಶ ನನ್ನದಾಗಿತ್ತು. ಅಂದು ನಾನು ತರಾಸು ಅವರ 'ಹಂಸಗೀತೆ' ಕಾದಂಬರಿ ಓದಿನ ಅನುಭವವನ್ನು ಹಂಚಿಕೊಂಡೆ. ಆ ಓದಿನ ಅನುಭವವನ್ನು ನಿಮ್ಮೊಂದಿಗೂ ಹಂಚಿಕೊಳ್ಳಲು ಇಚ್ಛಿಸುತ್ತೇನೆ.

ಮೋಹನ, ಕಲ್ಯಾಣಿ, ಶಂಕರ, ಶ್ರೀ, ಭಾಗ್ಯಶ್ರೀ, ರಾಗಶ್ರೀ... ಹೀಗೆ ರಾಗಗಳ ಹೆಸರನ್ನು ನಮ್ಮ ಹೆಸರನ್ನಾಗಿ ಇಟ್ಟುಕೊಳ್ಳುವ ಅಭ್ಯಾಸ ನಮಗೆಲ್ಲ ತಿಳಿದದ್ದೇ. ಆದರೆ, ರಾಗವೇ ಹೆಸರಿನ ಜತೆಗೆ ಉಪಾಧಿಯಾಗಿ ಬರುವ ಹಾಗೆ ಬದುಕುವುದು ಸಾಧನೆ. ಚಿತ್ರದುರ್ಗದಲ್ಲಿ ಪಾಳೆಯಗಾರರು ವೈಭವದಿಂದ ಆಳುತ್ತಿದ್ದ ಕಾಲದಲ್ಲಿ ಒಬ್ಬ ಸಂಗೀತಗಾರರಿದ್ದರು. ಅವರ ಹೆಸರು ವೆಂಕಟಸುಬ್ಬಯ್ಯ. ಹುಟ್ಟುತ್ತಲೇ ಸಂಗೀತದಲ್ಲಿ ಅದ್ಭುತ ಆಸಕ್ತಿ ಹೊಂದಿದ್ದ ಅವರಿಗೆ ವಂಶಪಾರಂಪರ್ಯವಾದ ಜ್ಯೋತಿಷ್ಯ ವಿದ್ಯೆ ಒಲಿಯಲೇ ಇಲ್ಲ. ನಂತರ ಮಗನ ಇಚ್ಛೆಯಂತೆ ಪೋಷಕರು ಚಿತ್ರದುರ್ಗದಲ್ಲೇ ಇದ್ದ ತಿರುಮಲಯ್ಯ ಎಂಬುವರ ಬಳಿ ಅವರನ್ನು ಸಂಗೀತ ಶಿಕ್ಷಣಕ್ಕಾಗಿ ಸೇರಿಸುತ್ತಾರೆ. ಅಗಾಧ ಆಸಕ್ತಿಯಿಂದ ಕಲಿಯುತ್ತಿದ್ದ ವೆಂಕಟಸುಬ್ಬಯ್ಯನವರಿಗೆ ತಿರುಮಲಯ್ಯನವರ ಅಕಾಲಿಕ ಮರಣ ಆಘಾತ ಉಂಟುಮಾಡುತ್ತದೆ. ಇದರಿಂದ ತಮ್ಮ ಸಂಗೀತ ಕಲಿಕೆ ನಿಂತೇ ಹೋಯಿತೆಂದು ದುಃಖಿತರಾಗುತ್ತಾರೆ. ನೋವಿನಲ್ಲಿದ್ದ ಅವರಿಗೆ ಸೋದರಮಾವ ಅನಂತಯ್ಯ ಧೈರ್ಯ ತುಂಬುತ್ತಾರೆ. ದಿನದಿಂದ ದಿನಕ್ಕೆ ಅವರ ಸಂಗೀತ ಕಲಿಯುವ ಬಯಕೆ ಹೆಚ್ಚಾಗುತ್ತದೆ. ಆದರೆ, ಆ ಬಯಕೆಗಳನ್ನೆಲ್ಲ ಒಗ್ಗೂಡಿಸಿ ಗುರುವಿನ ಆಗಮನಕ್ಕಾಗಿ ಕಾಯುವಂತೆ ಸಲಹೆ ನೀಡುತ್ತಾರೆ. ಅಂತೆಯೆ, ಒಂದು ಮಧ್ಯರಾತ್ರಿ ಭಿಕ್ಷುಕನ ರೂಪದಲ್ಲಿ ವೆಂಕಟಸುಬ್ಬಯ್ಯನವರಿಗೆ ಒಬ್ಬ ಗುರು ದೊರಕುತ್ತಾರೆ ಮತ್ತು ಅವರನ್ನೇ ಹಿಂಬಾಲಿಸಿ ಹೊರಟೇ ಬಿಡುತ್ತಾರೆ.



। ಅಮೃತಾ ನಿತಿನ್‌ಶಾಸ್ತ್ರೀ, ಶಿಕ್ಷಕಿ

೩ನೇ ಪುಟಕ್ಕೆ

## ಸಂಪಾದಕೀಯ

ಆತ್ಮೀಯ ಓದುಗರೇ,

ಮಕ್ಕಳ ಬೌದ್ಧಿಕ, ಭೌತಿಕ, ಸಾಮಾಜಿಕ, ಸಾಂಸ್ಕೃತಿಕ, ನೈತಿಕ ಮೌಲ್ಯಗಳಿಂದ ಕೂಡಿರುವ ಬುದ್ದಿಶಕ್ತಿಯನ್ನು ಉತ್ತೇಜಿಸಿ, ಅವರನ್ನು ಸರ್ವತೋಮುಖವಾಗಿ ಮತ್ತು ಸದೃಢರನ್ನಾಗಿ ರೂಪುಗೊಳಿಸುವುದೇ ಶಿಕ್ಷಣ. ಈ ನಿಟ್ಟಿನಲ್ಲಿ ನಮ್ಮ ಅರಿವು ಶಾಲೆಯಲ್ಲಿ ಮಕ್ಕಳ ಕಲಿಕೆಗೆ ಪೂರಕವಾಗಿ ಅನೇಕ ಚಟುವಟಿಕೆಗಳು ರೂಪುಗೊಂಡಿವೆ. ಇದರ ಮೂಲಕ ಪಠ್ಯಕ್ರಿಯೆಗೆ ಮಕ್ಕಳು ಸಿದ್ಧರಾಗಿ ಮತ್ತು ಪಠ್ಯೇತರ ಚಟುವಟಿಕೆಗಳಲ್ಲೂ ತೊಡಗಿಸಿಕೊಂಡು ತಮ್ಮ ಅರಿವನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ. ಈ ನಿಟ್ಟಿನಲ್ಲಿ ೨೦೧೮ ರ ಜುಲೈ ತಿಂಗಳಿನಲ್ಲಿ ಸಾಕಷ್ಟು ಸ್ಥಳಗಳಿಗೆ ಭೇಟಿ ನೀಡಲಾಗಿದೆ. ಈಜು ತರಗತಿಗಳಿಗೆ ಹೋಗಿ ಕಲಿಕೆಯ ಜತೆಗೆ ಮಕ್ಕಳು ಮೋಜನ್ನೂ ಅನುಭವಿಸಿದ್ದಾರೆ. ನಾಟಕದಲ್ಲೂ ಅನುಭವಿಸಿ ಸೈ ಅನ್ನಿಸಿಕೊಂಡಿದ್ದಾರೆ. 'ಬಿದಿರು' ವಿಷಯಾಧಾರಿತ ಕಲಿಕೆಗೆ ಸಂಬಂಧಿಸಿದಂತೆ ಚಟುವಟಿಕೆಗಳು ಸಾಂಗವಾಗಿ ನಡೆಯುತ್ತಿವೆ. ಮುಖ್ಯೋಪಾಧ್ಯಾಯಿನಿಯಾಗಿ ಕೆಲಸ ಹೆಚ್ಚಿದ್ದರೂ, ಪ್ರೀತಿಯಿಂದ ಇಷ್ಟಪಟ್ಟು ಈ ಸಂಚಿಕೆಯನ್ನು ಸಂಪಾದಿಸಿದ್ದೇನೆ. ಈ ಸಂಚಿಕೆಯನ್ನು ಸಂಪಾದಿಸಲು ಅನುವು ಮಾಡಿಕೊಟ್ಟ ಅರಿವು ಆಡಳಿತ ಮಂಡಳಿ ಸದಸ್ಯರಿಗೆ, ಲೇಖನಗಳನ್ನು ನೀಡಿ ಸಹಕರಿಸಿದ ಮಕ್ಕಳಿಗೆ, ಶಿಕ್ಷಕರಿಗೆ ಧನ್ಯವಾದಗಳು.



| ಎಂ.ಮಂಜುಳಾ,
ಮುಖ್ಯಶಿಕ್ಷಕಿ
ಸಂಚಿಕೆ ಸಂಪಾದಕಿ

## ಜುಲೈನಲ್ಲಿ ಶಾಲೆಗೆ ಭೇಟಿ ನೀಡಿದವರು

೧. ಶೋಭಾರಾಣಿ ವಿ.ಜಿ., ಗ್ರಾಫೋಥೆರಪಿಸ್ಟ್
೨. ಶ್ರೀಕಂಠಮೂರ್ತಿ, ಖಾಸಗಿ ಸಂಸ್ಥೆ ನೌಕರರು
೩. ವಿನುತಾ, ಟಾಟಾ ಟ್ರಸ್ಟ್
೪. ಚಂದ್ರಶೇಖರಯ್ಯ, ಪ್ರೌಢಶಾಲಾ ನಿವೃತ್ತ ಮುಖ್ಯೋಪಾಧ್ಯಾಯರು
೫. ಗೀತಾ ಆರ್., ಸಹಶಿಕ್ಷಕಿ, ನಾಗವಾಲ
೬. ಶೇಷಮ್ಮ, ಎಂಎಸ್‌ಡಬ್ಲ್ಯು ವಿದ್ಯಾರ್ಥಿನಿ, ರಾಯಚೂರು
೭. ಅರವಿಂದ ಬಿ.ಸಿ., ಪ್ರಾಜೆಕ್ಟ್ ಮ್ಯಾನೇಜರ್, ಮೈಸೂರು
೮. ಡಾ.ಬಿ.ಎಂ.ಜಾಕಿರ್, ಪ್ರಾಂಶುಪಾಲರು, ಆಲ್ ಆಮೀನ್ ಕಾಲೇಜು, ಬೆಂಗಳೂರು

## ಎಸ್‌ಪಿಬಿ ಸ್ನೇಹ ದೊರಕಿಸಿಕೊಟ್ಟ ಟೆಲಿಫೋನ್ ಡೈರೆಕ್ಟರಿ

**'ಅನುಭವ ಸವಿಯಲ್ಲ; ಅದರ ನೆನಪೇ ಸವಿಯು'**

ಅದು ೧೯೮೫ ನೇ ಇಸವಿ. ಬ್ಯಾಂಕ್ ಉದ್ಯೋಗಿ ಯಾಗಿದ್ದ ನಾನು ತರಬೇತಿಗೆಂದು ಚೆನ್ನೈಗೆ ಹೋಗಿದ್ದೆ. ಬಿಡುವಿನ ಸಮಯದಲ್ಲಿ ಕೈಗೆ ಸಿಕ್ಕಿದ ಸ್ಥಳೀಯ ದೂರವಾಣಿ ಕೈಪಿಡಿ (ಟೆಲಿಫೋನ್ ಡೈರೆಕ್ಟರಿ)ಯನ್ನು ತಿರುವಿ ಹಾಕುತ್ತಿದ್ದೆ. ಕುತೂಹಲ ಕ್ಕೆಂದು ನನ್ನ ನೆಚ್ಚಿನ ಗಾಯಕರಾದ ಎಸ್.ಪಿ.ಬಾಲ ಸುಬ್ರಹ್ಮಣ್ಯಂ ಅವರ ಹೆಸರು ಹುಡುಕಿದೆ, ಅಬ್ಬಾ! ಸಿಕ್ಕೇ ಬಿಟ್ಟಿತು. ಮತ್ತೇನು ಮಾಡುವುದು? ಆಸೆ ಮತ್ತು ಅಳುಕಿನಿಂದಲೇ ಅವರ ಮನೆಯ ದೂರವಾಣಿ ಸಂಖ್ಯೆಗೆ ಕರೆ ಮಾಡಿಯೇಬಿಟ್ಟೆ. ಎಸ್‌ಪಿಬಿ ಅವರ ಕಿರಿಯ ಸಹೋದರ ಎಸ್.ಪಿ. ಜಗದೀಶ್ ನನ್ನ ಕರೆ ಸ್ವೀಕರಿಸಿದರು. ನೆಚ್ಚಿನ ಗಾಯ ಕನನ್ನು ನೋಡಬೇಕೆಂಬ ನನ್ನ ಬಹುದಿನಗಳ ಮನದಾಳವನ್ನು ಅವರ ಜತೆ ಹಂಚಿಕೊಂಡೆ. ಮಾರನೇ ದಿನ ಸಂಜೆ ೫ ಗಂಟೆಗೆ ಮನೆಗೆ ಬರುವಂತೆ ಅವರು ನನಗೆ ಆಹ್ವಾನ ನೀಡಿದರು. ನನ್ನ ಹೆಸರು, ಊರು ಮತ್ತು ನಾನು ಚೆನ್ನೈನಲ್ಲಿ ಉಳಿದುಕೊಂಡಿದ್ದ ಸ್ಥಳದ ವಿವರ ವನ್ನು ಕೇಳಿ ತಿಳಿದುಕೊಂಡರು. ಅಲ್ಲದೆ, ಅಲ್ಲಿಂದ ಅವರ ಮನೆಗೆ ಹೇಗೆ ತಲುಪಬೇಕು ಎಂಬ ಬಗ್ಗೆ ಮಾಹಿತಿಯನ್ನೂ ನೀಡಿದರು. ನನ್ನ ಸಂತೋ ಷಕ್ಕೆ ಆಗ ಪಾರವೇ ಇರಲಿಲ್ಲ. ಮರುದಿನ ನಾನು ಅವರ ಮನೆ ತಲುಪಿದಾಗ ಸಮಯ ಸಂಜೆ ೫.೧೦ ಆಗಿತ್ತು. ಮನೆಯ ಒಳಾ ವರಣದ ಹುಲ್ಲು ಹಾಸಿನ ಮೇಲೆ ನಿರ್ಮಾಪಕರೊಬ್ಬರ ಜೊತೆ ಎಸ್‌ಪಿಬಿ ಮಾತನಾಡುತ್ತಾ ಕುಳಿತಿದ್ದರು. ನನ್ನನ್ನು ನೋಡಿದೊಡನೆಯೇ, 'ಹಲೋ ವರದರಾಜನ್ ವೆಲ್ ಕಮ್' ಎಂದು ನಗುತ್ತಾ ಕರೆದು ಮನೆಯ ಒಳಗೆ ಕುಳಿತುಕೊಳ್ಳುವಂತೆ ಹೇಳಿದರು. ಆಗ ನನಗಾದ ಆಶ್ಚರ್ಯ ಅಷ್ಟಿಷ್ಟಲ್ಲ. ಸ್ವಲ್ಪ ಸಮಯದ ಬಳಿಕ ಎಸ್‌ಪಿಬಿ ಅವರು ನನ್ನ ಬಳಿಗೆ ಬಂದು ಕುಶಲೋಪರಿ ವಿಚಾರಿಸಿದರು. ಮಾರನೆಯ ದಿನ ತಮ್ಮದೇ ಸಂಗೀತ ನಿರ್ದೇಶನದಲ್ಲಿ ಪ್ರಸಾದ್ ಸ್ಟುಡಿಯೋದಲ್ಲಿ ನಡೆಯಲಿದ್ದ ಹಾಡಿನ ಧ್ವನಿ ಮುದ್ರಣವನ್ನು ನೋಡುವ ಕುತೂಹಲವಿದ್ದರೆ ಬರುವಂತೆ ನನ್ನನ್ನು ಆಹ್ವಾನಿಸಿದರು. ಸ್ಟುಡಿಯೋ ಪ್ರವೇಶಕ್ಕೆ ನನಗೊಂದು ಪರಿಚಯ ಪತ್ರ ನೀಡುವಂತೆ ವಿನಂತಿಸಿದಾಗ, 'ಅಂಥದ್ದೇನೂ ಬೇಡ, ಅಲ್ಲಿಗೆ ಬಂದು ನಾನು ಎಸ್‌ಪಿಬಿಯವರ ಸ್ನೇಹಿತ ಎಂದು ಹೇಳಿ ಸಾಕು' ಎಂದರು. ನಾನೆಲ್ಲಿ? ಅವರೆಲ್ಲಿ? ನಾನವರ ಸ್ನೇಹಿತ ನಾಗುವುದೆಂದರೆ ಏನು? ಎಂತಹ ದೊಡ್ಡಗುಣ ಅವರದ್ದು ಎನಿಸಿತು. ನಾನು ಎಸ್‌ಪಿಬಿಯವರ ಸ್ನೇಹಿತ ಎಂದೊ ಡನೆಯೇ ಸ್ಟುಡಿಯೋದ ಕಾವಲುಗಾರ ಒಳ ಹೋಗಲು ಅನುಮತಿಸಿದ. ನನಗಿನ್ನೂ ಚೆನ್ನಾಗಿ ನೆನಪಿದೆ, ಅಂದು 'ದೇವರೆಲ್ಲಿದ್ದಾನೆ' ಕನ್ನಡ ಚಿತ್ರದ ಹಾಡಿನ ಧ್ವನಿಮುದ್ರಣ ನಡೆಯುತ್ತಿತ್ತು. ನನ್ನನ್ನು ನೋಡಿದ ಎಸ್‌ಪಿಬಿಯವರು, 'ವೆಲ್‌ಕಮ್' ಎಂದು ಹೇಳಿ, 'ನಾನಿಲ್ಲಿ ತುಂಬಾ ಬಿಜಿ. ಆದರೆ ನೀವಿಲ್ಲಿ ಎಲ್ಲಿ ಬೇಕಾದರೂ ಓಡಾಡ ಬಹುದು. ಯಾರಾ ದರೂ ಕೇಳಿದರೆ ಎಸ್‌ಪಿಬಿ ಸ್ನೇಹಿತ ಅಂಥ ಹೇಳಿ' ಎಂದರು. ಆ ಕ್ಷಣದಲ್ಲಿ ಅವರ ಸರಳತೆ, ಸಜ್ಜನಿಕೆ ಮತ್ತು ಸೌಜನ್ಯ ನನ್ನನ್ನು ಮೂಖ ವಿಸ್ಮಿತನನ್ನಾಗಿಸಿತು. ಹಾಗೆಯೇ ಓಡಾಡುತ್ತಾ ಒಂದು ಕೋಣೆ ಒಳಗೆ ಹೋದಾಗ ಮತ್ತೊಂದು ಅಚ್ಚರಿ ಕಾದಿತ್ತು. ಅಲ್ಲಿ ಮತ್ತೊಬ್ಬ ಪ್ರಸಿದ್ಧ ಹಿನ್ನೆಲೆ ಗಾಯಕಿ ಎಸ್.ಜಾನಕಿ ಅಮ್ಮ ಕುಳಿತಿದ್ದರು. ನಾನು ಮೈಸೂರಿ ನವನು ಎಂದಾಗ ಕನ್ನಡದಲ್ಲೇ ಮಾತನಾಡಿಸಿ, ಎಸ್‌ಪಿಬಿ ಹೇಗೆ ಪರಿ ಚಯ ಎಂದು ಕೇಳಿದರು. ನಾನು ಎಲ್ಲ ವನ್ನೂ ವಿವರಿಸಿದಾಗ ಜಾನಕಿ ಅಮ್ಮ, 'ಎಸ್‌ಪಿಬಿ ಅವರ ವ್ಯಕ್ತಿತ್ವವೇ ಅಂಥದ್ದು. ಅತ್ಯಂತ ಸರಳ, ಸಜ್ಜನ ಹಾಗೂ ಸ್ನೇಹ ಜೀವಿ ಎಂದು ಮನತುಂಬಿ ಹೊಗಳಿದರು.

ಅಂದು ಎಸ್‌ಪಿಬಿ ಹಾಗೂ ಎಸ್. ಜಾನಕಿ ಅಮ್ಮನವರ ಕಂಠಸಿರಿಯಲ್ಲಿ ಧ್ವನಿಮುದ್ರಿತವಾದ ಹಾಡು 'ಏಕೋ ಏನೋ ಕಾಣೆನು ನಾನು, ನಿನ್ನನು ನೋಡಿದ ಮೇಲೆ, ಹಸಿವು ಇಲ್ಲ, ನಿದಿರೆ ಇಲ್ಲ, ನಿನದೆ ನೆನಪು ದಿನವೆಲ್ಲ, ನಾನೇನೂ ಮಾಡಲೀ..., ಹೇಳು ನೀನೇ...' ಅಂದು ನನಗಾದ ಅನುಭವವನ್ನು ಇಂದಿಗೂ ನೆನಪಿಸಿಕೊಂಡಾಗ 'ಅನುಭವ ಸವಿಯಲ್ಲ; ಅದರ ನೆನಪೇ ಸವಿಯು' ಎಂಬ ನಾಣ್ಣುಡಿ ಎಷ್ಟು ಅರ್ಥ ಗರ್ಭಿತ ಎನಿಸುತ್ತದೆ.





| ಎನ್.ವರದರಾಜನ್,
ಅರಿವು ಬಳಗ

## ಆಷಾಢದಲ್ಲಿ ನಾ ಕಂಡ ಚಾಮುಂಡಿ ವೈಭವ



ಹಿಂದುಗಳು ದೇವರನ್ನು ಪೂಜೆ ಮಾಡುವುದು ಹೆಚ್ಚು. ಮೈಸೂರಿನಲ್ಲಿ ಚಾಮುಂಡಿಗೆ ಆಷಾಢ ಶುಕ್ರವಾರದಂದು ವಿಶೇಷ ಪೂಜೆ ನಡೆಯುತ್ತದೆ. ತುಂಬಾ ಜನರು ಚಾಮುಂಡಿ ಬೆಟ್ಟಕ್ಕೆ ಹೋಗುತ್ತಾರೆ. ಮೆಟ್ಟಿಲುಗಳನ್ನು ಹತ್ತಿ ದೇವರ ದರ್ಶನ ಪಡೆಯುತ್ತಾರೆ. ನಾನೂ ಮೆಟ್ಟಿಲುಗಳ ಮೂಲಕ ನನ್ನ ಅಮ್ಮನೊಂದಿಗೆ ಬೆಟ್ಟ ಹತ್ತಿ, ಸರದಿಗಾಗಿ ತುಂಬಾ ಸಮಯ ನಿಂತಾದ ಮೇಲೆ ದೇವರ ದರ್ಶನ ಮಾಡಿದೆ. ದೇವಸ್ಥಾನ ಮತ್ತು ದೇವರಿಗೆ ಚೆನ್ನಾಗಿ ಅಲಂಕಾರ ಮಾಡಿದ್ದರು, ತುಂಬಾ ಖುಷಿ ಯಾಯ್ತು. ದೇವಸ್ಥಾನದ ತುಂಬ ಜನವೋ ಜನ. ಅಲ್ಲಿ ಕೊಡುತ್ತಿದ್ದ ಪ್ರಸಾದವನ್ನು ತೆಗೆದುಕೊಂಡು, ಕೈ ಮುಗಿದು ಮನೆಗೆ ಬಂದೆವು.



| ಅದಿತಿ, ೪ನೇ ತರಗತಿ

## ಪ್ಲಾಸ್ಟಿಕ್ ಬಳಸಬೇಡಿ ಪ್ಲೀಸ್...

ನೀವು ನದಿಗೆ ಪ್ಲಾಸ್ಟಿಕ್ ಹಾಕ್ತೀರಾ? ಇದರ ಬಗ್ಗೆ ನ್ಯೂಸ್‌ಪೇಪರ್‌ನಲ್ಲಿ ಬರುತ್ತೆ, ಈ ನದಿಯಲ್ಲಿ ಪ್ಲಾಸ್ಟಿಕ್–ಆ ನದಿಯಲ್ಲಿ ಪ್ಲಾಸ್ಟಿಕ್ ಅಂತ. ಅದಕ್ಕೆ ಪ್ಲಾಸ್ಟಿಕ್ ಬಳಕೆ ಮಾಡಬೇಡಿ. ಪ್ಲಾಸ್ಟಿಕ್‌ನಿಂದ ಪ್ರಾಣಿ–ಪಕ್ಷಿಗಳಿಗೆ ಕಾಯಿಲೆ ಬರುತ್ತೆ.

ನೀವು ಅಂಗಡಿಗೆ ಹೋದಾಗ ಪ್ಲಾಸ್ಟಿಕ್ ಕವರ್‌ಬಳಕೆ ಮಾಡ್ತೀರಾ? ಹಳೇ ಕಾಲದಲ್ಲಿ ಹಾಲನ್ನು ಗಾಜಿನ ಬಾಟಲ್‌ನಲ್ಲಿ ತರ್‍ತಾ ಇದ್ರಂತೆ. ಆದರೆ ಈಗ ಪ್ಲಾಸ್ಟಿಕ್ ಪ್ಯಾಕೆಟ್‌ನಲ್ಲಿ ತರುತ್ತಾರೆ. ಗವರ್ನಮೆಂಟು ಹಳೇಕಾಲದಂತೆಯೇ ಮಾಡಿದ್ರೆ ಸರಿ.

ಮತ್ತೆ ನೀವು ಪ್ಲಾಸ್ಟಿಕ್ ಬ್ಯಾನ್ ಮಾಡೋ ಹಾಗೆ ಮಾಡಿ. ಪ್ಲಾಸ್ಟಿಕ್ ಬಳಕೆ ಮಾಡ್ಲೇಬೇಕು ಅಂದ್ರೆ ಚೂರು ಬಳಕೆ ಮಾಡಿ ಪ್ಲೀಸ್...



| ರಚನಾ ವಿ., ೪ ನೇ ತರಗತಿ

# ಬೆಳೆದು ತಿನ್ನುವ ಖುಷಿ ಬೇರೊಂದರಲ್ಲಿ ಇಲ್ಲ

ನಮ್ಮ ಜಮೀನು ಮೈಸೂರಿನಿಂದ ಸುಮಾರು ೧೫ ಕಿ.ಮೀ. ದೂರದಲ್ಲಿದೆ. ಜಮೀನಿನ ಹೆಸರು 'ಗೂಡುತೋಟ'. ಬೋಗಾದಿ ರಸ್ತೆಯಲ್ಲಿ ಹೋದರೆ ನಮ್ಮ ಜಮೀನು ಸಿಗುತ್ತದೆ. ನಾವು ಮತ್ತು ನಮ್ಮ ಸ್ನೇಹಿತರೊಬ್ಬರು ಸೇರಿ ಜಮೀನು ನೋಡಿಕೊಳ್ಳುತ್ತಿದ್ದೇವೆ. ಅಲ್ಲಿ ನೀರಿನ ಕೊರತೆಯಿದೆ. ಆದ್ದರಿಂದ ಹೆಚ್ಚು ಗಿಡಗಳನ್ನು ಬೆಳೆಸಲು ಸಾಧ್ಯವಾಗುತ್ತಿಲ್ಲ. ಅಲ್ಲಿಗೆ ಹೋಗಿ ಸ್ವಲ್ಪ ಹೊತ್ತು ಉಳಿದರೆ ಮನಸ್ಸಿಗೆ ನೆಮ್ಮದಿ ಸಿಗುತ್ತದೆ. ಪ್ರಕೃತಿಯೊಂದಿಗೆ ಕಾಲ ಕಳೆಯಲು ನಮ್ಮ ಜಮೀನು ಒಂದು ಉತ್ತಮ ಸ್ಥಳ ಎಂದೆನಿಸುತ್ತದೆ.

ನಮ್ಮ ಜಮೀನಿನಲ್ಲಿ ಹೆಚ್ಚು ಹೆಚ್ಚು ಮರಗಿಡಗಳೇನೂ ಇಲ್ಲ. ಆದರೆ ಮಳೆ ನೀರಿನಲ್ಲೇ ಬೆಳೆಯುವ ಕೆಲವು ಮರ–ಗಿಡಗಳಿವೆ. ಉದಾ: ಮಾವಿನಮರ, ಹುಣಸೆಮರ, ಬೇವಿನಮರ, ಸಪೋಟ ಮತ್ತು ಸೀಬೆಯಂತಹ ಹಣ್ಣಿನ ಮರಗಳೂ ಇವೆ. ಹೋದ ವರ್ಷ ಮುಂಗಾರು ಮಳೆ ಬರುವ ಹೊತ್ತಿಗೆ ಜಮೀನಿನಲ್ಲಿ ಉಳುಮೆ ಮಾಡಿಸಿ ರಾಗಿ, ಜೋಳ, ಹಾರಕ, ಅಲಸಂದೆ... ಹೀಗೆ ಹಲವು ಬೀಜಗಳನ್ನು ಬಿತ್ತಿದ್ದೆವು. ಅಂದು ನಮ್ಮೆಲ್ಲರಲ್ಲಿ ಉತ್ಸಾಹ ಹೆಚ್ಚಾಗಿತ್ತು. ಚೆನ್ನಾಗಿ ಮಳೆ ಬಂದರೆ ಸಾಕು, ಬೆಳೆ ಚೆನ್ನಾಗಿಯೇ ಬರುತ್ತದೆ ಎಂಬ ಭರವಸೆ ಇತ್ತು. ಹಲವು ತಿಂಗಳು ಕಾತುರದಿಂದ ಕಾದೆವು. ಒಂದೆರಡು ಬಾರಿ ಮಳೆಯೂ ಬಂತು. ಆದರೆ ಯಾವ ಮೊಳಕೆಯೂ ಮಣ್ಣಿನಿಂದ ಮೇಲೇಳಲೇ ಇಲ್ಲ. ನಿರಾಸೆ ನಮ್ಮನ್ನು ಆವರಿಸಿತು. ಆದರೂ ಛಲ ಬಿಡದೆ ಸೊಪ್ಪಿನಕಡಲೆ ಹಾಕಿದೆವು. ಅಷ್ಟರಲ್ಲಿ ಒಂದೆರಡು ಮಳೆ ಬಿದ್ದು ನಾವು ಹಾಕಿದ್ದ ಹಾರಕ ಗಿಡ ಚಿಗುರಿ, ಉದ್ದವಾಗಿ ಬೆಳೆದು ನಮಗೆಲ್ಲರಿಗೂ ಅತ್ಯಾನಂದವಾಯಿತು. ಒಂದೆರಡು ವಾರ ಜಮೀನಿಗೆ ಹೋಗಿ ಕೊಯ್ಲು ಮಾಡಿ ಬಂದೆವು. ಈಗ ನಮಗೆ ಪ್ರತಿಫಲವಾಗಿ ೫೦ ಕೆ.ಜಿ. ಹಾರಕ ಸಿಕ್ಕಿದೆ. ಬೆಳೆದು ತಿನ್ನುವ ಖುಷಿ ಇನ್ನೊಂದರಲ್ಲಿ ಇಲ್ಲ ಎನ್ನುವುದನ್ನು ಮನಗಂಡೆನು. ಈಗೀಗ ಜಮೀನು ನನಗೆ ಮತ್ತೊಂದು ಮನೆಯಂತೆ ಭಾಸವಾಗುತ್ತಿದೆ. ಜಮೀನಿನಲ್ಲಿ ಕಲಿಯಲು ಬೇಕಾದಷ್ಟಿದೆ. ಅಲ್ಲಿ ಕೆಲಸ ಮಾಡುವುದರಿಂದ ನಮ್ಮ ದೈಹಿಕ ಸಾಮರ್ಥ್ಯ ಹೆಚ್ಚುವುದಲ್ಲದೆ, ರೈತರು ಪಡುವ ನೋವುಗಳು ನಮಗೆ ಅರ್ಥವಾಗುತ್ತಾ ಹೋಗುತ್ತವೆ. ಒಂದು ತುತ್ತಿನ ಅನ್ನದ ಬೆಲೆಯೂ ತಿಳಿಯುತ್ತದೆ. ಏಕತಾನತೆಯಿಂದ ಕೂಡಿದ ನಮ್ಮ ದಿನಚರಿಯನ್ನು ತೊರೆದಂತಾಗುತ್ತದೆ. ಮೊದಮೊದಲು ನನಗೆ ಜಮೀನಿಗೆ ಹೋಗುವುದಕ್ಕೆ ಅಷ್ಟು ಇಷ್ಟವಾಗುತ್ತಿರಲಿಲ್ಲ. ನಂತರದಲ್ಲಿ ಅಲ್ಲಿಯ ಶಾಂತತೆ ನನ್ನನ್ನು ಪದೇ ಪದೇ ಅಲ್ಲಿಗೆ ಹೋಗಲು ಪ್ರೇರೇಪಿಸುತ್ತಿದೆ. ಮುಂದಿನ ದಿನಗಳಲ್ಲಿ ಅಲ್ಲೇ ಇದ್ದು, ಇನ್ನೂ ಹೆಚ್ಚಿನ ಕೆಲಸ ಮಾಡಲು ಯೋಜಿಸಿದ್ದೇನೆ.





| ಅದಿತಿ ಜಿ.ರಾವ್, ೧೦ ನೇ ತರಗತಿ

# ಒಂಟಿತನ ನೀಡಿದ ಅನುಭವ

ಜೂನ್ ೩೦ ರಂದು ನನ್ನ ಪೋಷಕರು ಶೃಂಗೇರಿಗೆ ಹೊರಟಿದ್ದರು. ಪರೀಕ್ಷೆ ಇದ್ದಿದ್ದರಿಂದ ನಾನು ಹೋಗಲಿಲ್ಲ. ಎರಡು ಕಣ್ಣೀರ ಹನಿಗಳಿಂದ ಅವರನ್ನು ಕಳಿಸಿಕೊಟ್ಟೆ. ನನ್ನಲ್ಲಿ ಒಂದು ತರಹದ ಬೇಸರದ ಛಾಯೆ ಆವರಿಸಿತು. ಊಟಕ್ಕೆ ಪಕ್ಕದ ಮನೆಗೆ ಹೋಗಿದ್ದೆ. ಊಟವೇನೋ ರುಚಿಯಾಗಿತ್ತು. ಆದರೆ ಅಮ್ಮನ ತಿಳಿಸಾರಿನ ರುಚಿ ಮೀರಿಸಲು ಸಾಧ್ಯವೇ? ರಾತ್ರಿ ಮಲಗುವ ಮುಂಚೆ ಅಪ್ಪ ಮತ್ತು ನಾನು ಮಾತನಾಡುವ ಕೆಲವು ವಿಷಯಗಳನ್ನು ಜ್ಞಾಪಿಸಿಕೊಂಡು ಮಲಗಿದೆ. ಬೆಳಗ್ಗೆ ಏಳುವಾಗ ಆಕಾಶವಾಣಿಯ ಸಂಸ್ಕೃತ ವಾರ್ತೆ, ಅಮ್ಮನ ಕೂಗು ಎಲ್ಲವೂ ನನ್ನನ್ನು ಕಾಡುತ್ತಿದ್ದವು. ಸ್ನಾನ ಮುಗಿಸಿ, ಮನೆಗೆ ಬೀಗ ಹಾಕಿ ಸೈಕಲ್ ತೆಗೆದುಕೊಂಡು ದೋಸೆ ಪಾಯಿಂಟ್‌ಗೆ ಹೋಗಿ ದೋಸೆ ತಿಂದು ಪರೀಕ್ಷೆ ಬರೆಯಲು ಹೊರಟೆ. ಲೈನ್ ಹಾಕು..., ನೀಟಾಗಿ ಬರೆ... ಆಲ್ ದಿ ಬೆಸ್ಟ್... ಪರೀಕ್ಷೆಗೆ ಹೋಗುವಾಗ ಅಮ್ಮ ಹೇಳುತ್ತಿದ್ದ ಮಾತುಗಳು ದಾರಿಯ ಮಧ್ಯೆ ನೆನಪಾದವು. ಆದರೆ ಅಂದು ಈ ಮಾತನ್ನು ಹೇಳಲು ಯಾರೂ ಇರಲಿಲ್ಲ. ನನಗೆ ನನ್ನ ಉಸಿರಿನ ಶಬ್ಧ ಮಾತ್ರ ಕೇಳಿಸುತ್ತಿತ್ತು. ಒಂದುಕ್ಷಣ ಭಯ, ಕೋಪ, ದುಃಖ ಹೀಗೆ ಎಲ್ಲ ಭಾವನೆಗಳೂ ನನ್ನನ್ನು ನುಂಗಿದವು.

ಪರೀಕ್ಷೆ ಬರೆದು ಮನೆಗೆ ಬಂದೆ. ಟೆರೇಸ್‌ಗೆ ಹೋಗಿ ಸುಮ್ಮನೆ ಕುಳಿತೆ. ಆಗ ನನಗೆ ಗಾಳಿ, ಹಕ್ಕಿ, ಮರಗಿಡಗಳು ಸೂರ್ಯನ ಕಿರಣ ಎಲ್ಲವೂ 'ಹೇಗೆ ಮಾಡಿದೆ ಪರೀಕ್ಷೆ' ಎಂದು ಕೇಳಿದಂತಾಯ್ತು. ನಾನು ಮೌನವಾಗಿದ್ದರೂ ಆ ಮೌನದ ಹಿಂದೆ ಸಾವಿರ ಮಾತುಗಳು ಅಡಗಿದ್ದವು. ಕೊನೆಗೆ ಅಪ್ಪ–ಅಮ್ಮ ಮನೆಗೆ ಬಂದರು. ನನಗೆ ಖುಷಿಯಾದರೂ ಏನನ್ನೋ ಗಳಿಸಿದ್ದೀನಿ ಅನಿಸಿತು. ಬಹುಶಃ ತಾಳ್ಮೆ ಇರಬಹುದೆ? ನನಗೂ ಗೊತ್ತಾಗುತ್ತಿಲ್ಲ....



| ನಿಹಾರಿಕಾ ಡಿ, ೯ನೇ ತರಗತಿ

# ಈಜು ಕಲಿಸಿಕೊಟ್ಟ ಆತ್ಮವಿಶ್ವಾಸ

ನಾನು ೧ ನೇ ತರಗತಿಯಿಂದಲೂ ಈಜು ಕಲಿಯಲು ಹೋಗುತಿದ್ದೇನೆ. ನನಗೆ ಈಗ ೧೪ ವರ್ಷ. ೯ನೇ ತರಗತಿಯಲ್ಲಿ ಓದುತ್ತಿದ್ದೇನೆ. ನನಗೀಗ ಈಜು ಎಂದರೆ ಬಹಳ ಇಷ್ಟ. ಆದರೆ ಮೊದಲೆಲ್ಲ ನೀರು ಅಂದರೆ ಭಯವಾಗುತ್ತಿತ್ತು. ಪುಟ್ಟಸ್ವಾಮಿ ಅಂತ ಒಬ್ಬರು ಸರ್ ಇದ್ದರು. ಅವರು ನನಗೆ ಕೆಲವು ವರ್ಷ ಈಜು ಹೇಳಿಕೊಟ್ಟರು. ನೀರಿನ ಭಯವಿದ್ದ ನನಗೆ ಪದೇ ಪದೇ ನೀರಿಗೆ ಬೀಳು, ಈಜು ಎಂದು ಬಲವಂತ ಪಡಿಸುತ್ತಿದ್ದರು. ಆಗ ಭಯವಾದರೂ ನೀರಿಗೆ ಬಿದ್ದು ಈಜು ಕಲಿತೆ. ನೀರಿನ ಭಯವಿದ್ದ ನನಗೆ ಕ್ರಮೇಣ ಭಯ ಹೊರಟು ಹೋಗಿ ಈಜು ಅಂದರೆ ಇಷ್ಟವಾಗತೊಡಗಿತು. ನಾನು ಇಷ್ಟಪಟ್ಟು ಕಲಿಯುತ್ತಿರುವ ವಿದ್ಯೆ ಎಂದರೆ ಈಜು. ನಾನು ಈಗ ಆತ್ಮವಿಶ್ವಾಸದಿಂದ ಈಜು ಹೊಡೆಯುತ್ತಿದ್ದೇನೆ. ಈಜಿನಿಂದ ಆತ್ಮವಿಶ್ವಾಸವೂ ಬಂದಿದೆ. | ಸಿಂಧು ಎಂ.ಆರ್., ೯ ನೇ ತರಗತಿ



# ಗುರುವಿನ ಮಾತು ಪಾಲಿಸುವ ಶಿಷ್ಯರಾಗೋಣವೇ?

೧ನೇ ಪುಟದಿಂದ

ಸದಾನಂದ ಬುವಾ ಎಂಬ ಆ ವ್ಯಕ್ತಿ ತನ್ನ ಜೀವನದ ಕಹಿ ಅನುಭವದಿಂದಾಗಿ ಯಾರನ್ನೂ ನಂಬದ ಸ್ಥಿತಿಯಲ್ಲಿ ಇರುತ್ತಾರೆ. ಹಾಗಾಗಿ ಮೊದಲಿಗೆ ವೆಂಕಟಸುಬ್ಬಯ್ಯನವರನ್ನು ಬಹಳ ಹೀನಾಯವಾಗಿ ನಡೆಸಿಕೊಳ್ಳುತ್ತಾರೆ. ಆತನದು ವಿಚಿತ್ರವಾದ ನಡವಳಿಕೆಯಾಗಿದ್ದು, ವೆಂಕಟ ಸುಬ್ಬಯ್ಯನವರು ನಾನಾ ರೀತಿಯ ಹಿಂಸೆಗಳನ್ನು ಅನುಭವಿಸಬೇಕಾಗುತ್ತದೆ. ಆದರೂ ಸಹಿಸಿಕೊಂಡು ಅವರೊಡನೆಯೇ ಇರುತ್ತಾರೆ.

ಹೀಗೆ ಒಂದು ದಿನ ಕಾಡಿನ ದಾರಿಯಲ್ಲಿ ನಡೆಯುತ್ತಿರುವಾಗ ಅವರ ಮೈ ಬಳಲಿ ಬೆಂಡಾಗಿ ಜ್ವರದ ತಾಪದಿಂದ ಕುಸಿದು ಬೀಳುತ್ತಾರೆ. ಬಹಳ ಹೊತ್ತಿನ ಬಳಿಕ ಎಚ್ಚರವಾಗಿ ಸುತ್ತಲೂ ನೋಡುತ್ತಾರೆ. ಕತ್ತಲು ಕವಿಯುತ್ತಿದ್ದ ಕಾಡಿನಲ್ಲಿ ಒಬ್ಬಂಟಿಯಾಗಿರುವುದು ಅವರ ಅರಿವಿಗೆ ಬಂದು, ಹೆದರಿ, ಹಾಡಲು ಶುರುವಿಡು ತ್ತಾರೆ. ಅದ್ಭುತವಾದ, ರಸವತ್ತಾದ ಗಾಯನ ಅವರ ಕಂಠದಿಂದ ಹೊಮ್ಮುತ್ತದೆ. ಇದನ್ನೆಲ್ಲ ಮರೆಯಲ್ಲಿ ಕುಳಿತು ನೋಡುತ್ತಿದ್ದ ಬುವಾ ಅವರು ಇಷ್ಟು ದಿನ ಕಾಡುತ್ತಿದ್ದ ಆ ಹುಡುಗನ ಸ್ಥಿತಿಯನ್ನು ನೋಡಿ ಅಯ್ಯೋ ಎನಿಸಿ, ಜ್ವರದ ತಾಪದಲ್ಲಿ ಬೇಯುತ್ತಿದ್ದ ಅವರಿಗೆ ಉಪಚರಿಸಿ, ಶಿಷ್ಯನನ್ನಾಗಿ ಸ್ವೀಕರಿಸುತ್ತಾರೆ. ಅಲ್ಲಿಂದ ವೆಂಕಟ ಸುಬ್ಬಯ್ಯನವರ ಸಂಗೀತ ಅಭ್ಯಾಸ ಹಗಲು–ಇರುಳುಗಳ ಪರಿವೆಯೇ ಇಲ್ಲದೆ ಅವಿಚ್ಛಿನ್ನವಾಗಿ, ಅದ್ಭುತವಾಗಿ ನಡೆಯುತ್ತದೆ. ಹೀಗೆ, ಹಲವಾರು ತೊಡಕು, ಹಿಂಸೆಗಳ ನಡುವೆಯೂ ಗುರುವಿನ ಮನಸ್ಸನ್ನು ಗೆದ್ದು ವಿದ್ಯೆ ಕಲಿತ ವೆಂಕಟ ಸುಬ್ಬಯ್ಯನವರು ಮುಂದೊಂದು ದಿನ ಚಿತ್ರದುರ್ಗ ಪ್ರಾಂತ್ಯದ ಬಹಳ ದೊಡ್ಡ ಸಂಗೀತ ಗಾರರಾಗಿ ಹೊಮ್ಮುತ್ತಾರೆ. ಅಷ್ಟೇ ಅಲ್ಲದೆ, ಗುರುಗಳು ನೀಡಿದ ಗುರಿಯಂತೆ, ಭೈರವಿ ರಾಗವನ್ನು ಉಪಾಸನೆಯ ಮೂಲಕ ಒಲಿಸಿ ಕೊಂಡು ಭೈರವಿ ವೆಂಕಟಸುಬ್ಬಯ್ಯ ಎಂದು ರಾಗವೇ ತಮ್ಮ ಹೆಸರಾಗುವಂತೆ ಸಾಧನೆ ಮಾಡುತ್ತಾರೆ. ಗುರು ಎಂದು ನಾವು ಯಾರನ್ನು ನಂಬುತ್ತೇವೆಯೋ ಅವರು ಏನೇ ಹೇಳಿದರೂ ಅದರಿಂದ ನಮಗೆ ಪ್ರಯೋಜನವಾದೀತು ಎಂಬ ನಂಬಿಕೆಯಿದ್ದಲ್ಲಿ ನಾವು ಏನೇ ಕಷ್ಟ ಅನು ಭವಿಸಿದರೂ ಮುಂದೆ ಅದು ಉಪಯುಕ್ತವೇ ಆಗುತ್ತದೆ ಎಂಬುದನ್ನು ಇವರ ಜೀವನ ಘಟನೆಗಳನ್ನು ನೋಡಿ ನಾವು ತಿಳಿಯಬಹುದು.ಅಂತೆಯೆ, ನಾವೂ–ನೀವೂ ಗುರುಗಳನ್ನು ಸಂಶಯಿಸದೆ ಗೌರವಿಸುವ, ಗುರುವಿನ ಮಾತನ್ನು ಪಾಲಿಸುವ ಶಿಷ್ಯರಾಗಿ ಬದುಕಲು ಸಾಧ್ಯವಿದೆಯೇ? ಯೋಚಿಸೋಣ.

## COME LET'S FLY

Hi hi butterfly,
Come, come let us fly.
So wonderful your wings are
Which make you fly far
Give those colours to me
I want to be thee.....
How beautiful you are
While you sit on a flower
How sweet the
nectar you suck
If I get to
taste, it's my
luck
Oh God!
What a
creation
It's real, not
imagination.





| Achala N, 9th Standard

## VASTAVYA- A STAY OVER EXPERIENCE

"Charity begins at home."... Like wise we at Arivu follow "Experience begins at Arivu."Children are exposed to singing, drama, craft, sports,visits,trips and stay over. We teach kids to be independent. Independence begins with staying at school over night and learning to manage on their own. This event happens every year and kids stay at school twice in a year. Our teachers get together and cook a delicious dinner and breakfast for the children.Few of the resource persons also join hands with us and engage the children with few local games, a small walk and talks.Good habits like sharing, helping, being kind are developed. This event along with its constituent activities is going to make a big difference in the lives of our children. It will become a strong foundation to the children along with education on which they can build an independent and beaut iful "house of life" in their future beginning from now... This is a wonderful step in creating a sense of sustaina bility and "live and let live" concept.





| Joylyn Sylvia Andrade Teacher

## DRAMA

I love this drama. The name of the drama is Jhum Jhum Aane mattey putta. We all enjoyed this drama. The drama teacher's name is Prashanth. On the day of drama Kiran Anna was there. He helped us with make-up. My part was that of a circus man and my acting was to laugh. I enjoyed this drama and it was very funny. We did the drama rehearsal at Kiruranga mandira and the main show was also at the same place. Kaju Anna made properties for the drama. On the first day Prashanth Anna asked us to play. I liked the Ganapathi-scene, Kaadu-Scene and Scene with the robber.





| Shaan Gowda, 4th Standard

## बॉयकट वाली लड़की

आधी रात की बात है एक ट्रेनं सुनसान जगह पर रुकी|थोड़े लोग सो रहे थे|एक पुरुष के पास एक आवारा कुत्ता बैठ गया  था वो करिण बेदी को देखकर भौका |कुत्ते की आवाज़ सुनकर वो पुरुष जाग गया और उन्होंने करिण से कहा ये जगह ठीक नहीं है, तुम रटियरगि रूम में चले जाओ |



करिण मन ही मन में मुश्कुरायी और सोचने लगी की उन्हें पता नहीं है कि वो लड़का नहीं लड़की है| स्कूल दनिों में करिण ढीली पतलून और कमीज़ पहनती थी | करिण स्कूल दनिों में टेनसि खेला करती थी और इसी अवसर में बहुत बार सफ़र करती |

उनके छोटे बाल के कारण लोग उनको लड़का समझते थे |


बचपन में उनके लम्बे बाल थे पर खेलते समय बाल परेशान करते थे इसलिए एक दनि अपने माता पिता से पूछकर अपने लम्बे बाल कटवाए|



| शीतल, 8 कक्षा

## SAPLING TO BIG PLANT

One day I was walking in my house-garden. I found an uprooted sapling, thought to plant it. I planted it on the ground and watered it with a glass of water. I watered it every day. After one week it grew a bit. From that day on I watered it with a mug every day. After one month it grew bigger. That day I decided to water it with three mugs of water. I continued it. After six months it had grown till my neck. I continued watering it daily. Now it has grown bigger than me. After a period of one year it shall give me a lot of flowers. I love my plant.





| Manasa, 4th Standard

## FRIENDS

In a farm lived a hen. The hen's name was Ruby.She loved the farm. One day one goat came into the farm. Ruby saw the goat and said, "Why have you come?" The goat told, "I have lost my mother. Ruby told, "I am so sorry. Can you be my friend? The goat said, "I will be your friend". They both lived happily ever after.



| Mythri, 4th Standard

## VISIT TO RMNH

On 13th of July 2018, we the 4th, 5th and 6th standard students went on a visit to R.M.N.H. (Regional Museum of Natural History) There Srinivas Anna was our guide. He took us around. There were three sections. The first section had stuffed animals like Tiger, Lion, Leopard, Fox and the Elephant. In the second section, there were animal-skeletons. There was a display of Whale-bones. The third section had charts explaining various crops grown all over India. There were also charts on festivals celebrated in different parts of India. Later we saw a short film on monkey who came to a town. Then we returned to school. I enjoyed the visit. I learnt about ragi and paddy varieties and double coconut. I liked stuffed animals.





| Arjun, 6th Standard

## प्यार

प्यार एक नशा है,
इस नशे से बहार आना कठिन है,
प्यार करना बुरी बात नहीं है,
प्यार करने  वाली को दुःख नहीं,
पहुचना बुरी बात है,
प्यार माता पिता  भाई बहन से
मिलता है,
प्यार ही  तो जीवन है,
प्यार एक छोटा या बड़ा नहीं,
प्यार तो प्यार है,
में प्यार से  शिक्षक और
साथियों  को धन्यवाद करता हु|





| ब्रह्मालिंगेश. पी, कक्षा 10